ಶ್ರೀ ಸಿ ಎಂ ಉದಾಸಿ: ಮಾನ್ಯ ಸದಸ್ಯರ ಕೋರಿಕೆಯಂತೆ ಆ ರಸ್ತೆ ಬಗ್ಗೆ ಪರಿಶೀಲನೆ ಮಾಡುತ್ತೇನೆ.

SRI SURESH GOWDA: Thank you Sir.

ಅಡಿಕೆಗೆ ಬೆಂಬಲ ಬೆಲೆಯ ಬಗ್ಗೆ

67(313) ಶ್ರೀ ವಸಂತಬಂಗೇರ ಕೆ:(ಬೆಳ್ತಂಗಡಿ) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆಗೆ ಬೆಂಬಲ ಬೆಲೆಯನ್ನು ನೀಡುವ ಬಗ್ಗೆ ಯಾವ ಕ್ರಮ ಕೈಗೊಳ್ಳಲಾಗಿದೆ.

ಆ) ಅಡಿಕೆ ಖರೀದಿಗೆ ಯಾವ ಸಂಸ್ಥೆಗಳನ್ನು ಗುರುತಿಸಲಾಗಿದೆ.

ಇ) ಬೆಂಬಲ ಬೆಲೆ ಪಡೆಯಲು ಇರುವ ಮಾನದಂಡಗಳೇನು;

ಈ) 2010–11ರ ಸಾಲಿನಲ್ಲಿ ಬೆಂಬಲ ಬೆಲೆ ನೀಡಲು ಎಷ್ಟು ಮೊತ್ತವನ್ನು ಕಾಯ್ದಿರಿಸಲಾಗಿದೆ ಮತ್ತು ಈವರೆವಿಗೆ ರೈತರಿಗೆ ನೀಡಲಾದ ಬೆಂಬಲ ಬೆಲೆಯ ಒಟ್ಟು ಮೊತ್ತ ಎಷ್ಟು?

ಶ್ರೀ ಶಿವರಾಜ್ ಎಸ್ ತಂಗಡಗಿ(ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು):

ಅ) 2009–10ನೇ ಸಾಲಿನಲ್ಲಿ ರಾಜ್ಯ ಸರ್ಕಾರವು ರಾಜ್ಯದ ಅಡಿಕೆ ಬೆಳೆಗಾರರ ಹಿತದೃಷ್ಟಿಯಿಂದ ರೈತರು ಬೆಳೆದ ಎಫ್.ಎ.ಕ್ಯೂ ಗುಣಮಟ್ಟದ ಬಿಳಿ (ಚಾಲಿ) ಅಡಿಕೆಗೆ ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಲ್ಲಿ ಪ್ರತಿ ಕ್ವಿಂಟಾಲ್‌ಗೆ ರೂ.7,500 ರಂತೆ (ರಾಜ್ಯ ಸರ್ಕಾರದ ಪ್ರೋತ್ಸಾಹಧನ ಪ್ರತಿ ಕ್ವಿಂ.ಗೆ ರೂ.600/– ಸೇರಿಕೊಂಡಂತೆ) ಒಟ್ಟು 6,000 ಮೆ.ಟನ್‌ಗೆ ಸೀಮಿತಗೊಳಿಸಿ. ಚಾಲಿ ಅಡಿಕೆಯನ್ನು ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಖರೀದಿಸಲು ಮಂಜೂರಾತಿ ನೀಡಿರುತ್ತದೆ. ಸದರಿ ಖರೀದಿ ಪ್ರಕ್ರಿಯೆಯು ಪ್ರಗತಿಯಲ್ಲಿದ್ದು, ಖರೀದಿ ಅವಧಿಯ ದಿನಾಂಕ:30.06.2010 ಕ್ಕೆ ಮುಕ್ತಾಯವಾಗುತ್ತದೆ. ಕೇಂದ್ರ ಸರ್ಕಾರವು ಈ ಯೋಜನೆಯನ್ನು ದಿನಾಂಕ:17.04.2010 ರವರೆಗೆ ಮಾತ್ರ ವಿಸ್ತರಿಸಿದೆ. ಆದರೆ, ರಾಜ್ಯ ಸರ್ಕಾರವು ಸದರಿ ಯೋಜನೆಯನ್ನು ದಿನಾಂಕ:18.04.2010 ರಿಂದ 30.06.2010 ರವರೆಗೆ ಹೆಚ್ಚುವರಿ ಅವಧಿಗೆ ವಿಸ್ತರಿಸಿದ್ದು, ಈ ಅವಧಿಯಲ್ಲಿ ಅಡಿಕೆ

ಖರೀದಿಯ ಪ್ರಮಾಣವನ್ನು 10,000 ಕ್ವಿಂಟಾಲ್‌ಗೆ ಮಾತ್ರ ಸೀಮಿತಗೊಳಿಸಿ ಆದೇಶ ಹೊರಡಿಸಿದೆ.

ಆ) ಅಡಿಕೆ ಖರೀದಿಗಾಗಿ ಈ ಕೆಳಕಂಡ ಸಂಸ್ಥೆಗಳನ್ನು ಗುರುತಿಸಲಾಗಿರುತ್ತದೆ.

1. ದಿ ಕ್ಯಾಂಪ್ಕೋ, ಮಂಗಳೂರು.
2. ಮಲೆನಾಡು ಅಡಿಕೆ ಪರಿಷ್ಕರಣೆ ಮತ್ತು ಮಾರಟ ಸಹಕಾರ ಸಂಘ, ಶಿವಮೊಗ್ಗ.
3. ಕರ್ನಾಟಕ ರಾಜ್ಯ ಸಹಕಾರ ಅಡಿಕೆ ಮಾರಾಟ ಮಹಾಮಂಡಳ ನಿ. ಶಿವಮೊಗ್ಗ.
4. ಆಪ್ಸ್‌ಕೋಸ್, ಸಾಗರ.
5. ತಾಲ್ಲೂಕು ವ್ಯವಸಾಯೋತ್ಪನ್ನ ಸಹಕಾರ ಮಾರಾಟ ಸಂಘ ನಿಯಮಿತ, ಸಾಗರ.
6. ದಿ ತೋಟಗಾರ್ಸ್ ಕೋ-ಆಪರೇಟಿವ್ ಸೇಲ್ಸ್ ಸೊಸೈಟಿ ಲಿ., ಶಿರಸಿ.

ಇ) ಮಾರುಕಟ್ಟೆ ಮಧ್ಯಪ್ರವೇಶ ಯೋಜನೆಯಡಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ಅಡಿಕೆಯನ್ನು ಖರೀದಿಸುತ್ತದೆ. ತೋಟಗಾರಿಕೆ ಇಲಾಖೆಯಿಂದ ನೀಡಲಾದ ಗುರುತಿನ ಚೀಟಿಯ ಆಧಾರದ ಮೇಲೆ ಚಾಲಿ ಅಡಿಕೆ ಬೆಳೆಯುವ ರೈತರಿಂದ ಗರಿಷ್ಟ ಪ್ರತಿಯೊಬ್ಬ ರೈತರಿಂದ 5 ಕ್ವಿಂಟಾಲ್‌ಗಳಷ್ಟು ಎಫ್.ಎ.ಕ್ಯೂ ಗುಣಮಟ್ಟದ (Above 17 mm size (Diameter), 0.2 Foreign matter % by weight maximum, 3.0 Mouldy black kernels % bycount maximum, 7.0 Moisture content % by weight maximum) ಅಡಿಕೆಯನ್ನು ಪ್ರತೀ ಕ್ವಿಂಟಾಲ್‌ಗೆ ರೂ.7,500/- ರಂತೆ (ಕೇಂದ್ರ ಸರ್ಕಾರದ ದರ ಪ್ರತೀ ಕ್ವಿಂಟಾಲ್‌ಗೆ ರೂ.6,900/- ಮತ್ತು ರಾಜ್ಯ ಸರ್ಕಾರದ ಹೆಚ್ಚುವರಿ ಪ್ರೋತ್ಸಾಹ ಧನ ರೂ.600/-) ರಂತೆ ಖರೀದಿಸಲಾಗುತ್ತಿದೆ.

ಈ) 2010-11 ನೇ ಸಾಲಿನ ಆಯವ್ಯಯದಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೂ.655.00 ಲಕ್ಷಗಳನ್ನು ಒದಗಿಸಲಾಗಿದೆ. ರಾಜ್ಯದಲ್ಲಿ ರೈತರ ಬೆಳೆಗಳಿಗೆ ಬೆಂಬಲ ಬೆಲೆ ಯೋಜನೆಯಡಿ ಆಹಾರ ಉತ್ಪನ್ನಗಳನ್ನು ಖರೀದಿಸಲು ಆವರ್ತನಿಧಿ 1999 ರಿಂದ ಇದ್ದು, ಈ ನಿಧಿಯನ್ನು ಸಂದರ್ಭಾನುಸಾರ ರೈತರ

ಉತ್ಪನ್ನಗಳನ್ನು ಬೆಂಬಲ ಬೆಲೆ ಯೋಜನೆಯಡಿ ಖರೀದಿಸಲಾಗುತ್ತದೆ. ಈವರೆಗೆ 1096.88 ಕೋಟಿ ಹಣ ಅವರ್ತಿಸಿ, ವಿವಿಧ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳನ್ನು ರೈತರಿಂದ ಖರೀದಿಸಲಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ಖರೀದಿಸಿದ ವಿವರಗಳು ಈ ಕೆಳಗಿನಂತಿರುತ್ತವೆ:-

ಕ್ರ.ಸಂ.	ವರ್ಷ	ಖರೀದಿಸಿದ ಮೊತ್ತ (ರೂ.ಕೋ.ಗಳಲ್ಲಿ)
1	2006-07	94.51
2	2007-08	41.58
3	2008-09	240.68
4	2009-10	182.00
5	2010-11	25.00

ಶ್ರೀ ಕೆ ವಸಂತಬಂಗೇರ: ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕ್ಯಾಂಪ್ಕೋದವರಿಗೆ ಅಡಿಕೆಯನ್ನು ಖರೀದಿಸುವಂಥಹ ಕೆಲಸವನ್ನು ವಹಿಸಿಕೊಟ್ಟಿದ್ದೀರಿ. ಆದರೆ ಕ್ಯಾಂಪ್ಕೋದವರು ಹೆಚ್ಚಿನ ರೈತರ ಅಡಿಕೆ ಖರೀದಿಸಲು ತಿರಸ್ಕರಿಸುತ್ತಿದ್ದಾರೆ. ಅವರಿಗೆ ಬೇಕಾದವರಿಂದ ಮಾತ್ರವೇ ಅಡಿಕೆ ಖರೀದಿ ಮಾಡಿ, ಬಡ ರೈತರಿಗೆ ಅನ್ಯಾವಾಗುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ? ಈ ಬಗ್ಗೆ ಸೂಕ್ತವಾಗಿ ತನಿಖೆ ನಡೆಸಿ, ಸೂಕ್ತ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಶಿವರಾಜ್ ಎಸ್ ತಂಗಡಗಿ [ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು]: ಮಾನ್ಯ ಅಧ್ಯಕ್ಷರೆ, ಈಗಾಗಲೇ ಕ್ಯಾಂಪ್ಕೋ ಸಂಸ್ಥೆ ಸೇರಿದಂತೆ ಒಟ್ಟು ಆರು ಸಂಸ್ಥೆಗಳಿಗೆ ಅಡಿಕೆ ಖರೀದಿಸಲು ನಾವು ವಹಿಸಿಕೊಟ್ಟಿದ್ದೇವೆ. ಆರು ಸಂಸ್ಥೆಗಳಿಂದ 27 ಕೋಟಿ 72 ಲಕ್ಷ ರೂ.ಗಳ ಹಣವನ್ನು ಖರ್ಚು ಮಾಡಿ ಅಡಿಕೆಯನ್ನು ಖರೀದಿ ಮಾಡಲಾಗಿದೆ. ಮಾನ್ಯ ಹಿರಿಯ ಸದಸ್ಯರಾದ ವಸಂತ ಬಂಗೇರರವರು, ಅಲ್ಲಿ ಯಾವುದೇ ರೀತಿಯಾದ ಅಡಿಕೆಯನ್ನು ಖರೀದಿ ಮಾಡುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಆದರೆ ಇಲ್ಲಿಯವರೆಗೂ ಖರೀದಿ ಮಾಡುತ್ತಿದ್ದಾರೆ. ತಮ್ಮ ಗಮನಕ್ಕೆ ಬಂದಿದ್ದನ್ನು ನನ್ನ ಗಮನಕ್ಕೆ ಈಗ ತಂದಿದ್ದೀರಿ. ಕ್ಯಾಂಪ್ಕೋದವರು ಸೇರಿದಂತೆ ಈ

ಎಲ್ಲಾ ಆರು ಸಂಸ್ಥೆಗಳೂ FAQ ಗುಣಮಟ್ಟದ ಅಡಿಕೆಯನ್ನು ಖರೀದಿಸುವಂತಹ ಕೆಲಸವನ್ನು ಮಾಡುತ್ತಿವೆ. FAQ ಹೊರತುಪಡಿಸಿ ಮತ್ತೆ ಬೇರೆ ಯಾವುದಾದರ ಬಗ್ಗೆ ದೂರಿದ್ದರೆ ನಾನು ಈ ಬಗ್ಗೆ ಕ್ಯಾಂಪ್ಕೋದವರ ಜೊತೆಗೆ ಮಾತನಾಡಿ ಸೂಕ್ತ ಸಲಹೆಯನ್ನು ಅವರಿಗೆ ಕೊಡುತ್ತೇನೆ. ಯಾವುದೇ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ನೋಡಿಕೊಳ್ಳುತ್ತೇನೆ. ಬೆಂಬಲ ಬೆಲೆ ನೀಡಿ ಅಡಿಕೆ ಖರೀದಿ ಮಾಡಲು 30ನೇ ತಾರೀಖಿನವರೆಗೂ ಅವಕಾಶ ಇತ್ತು. ಈಗ ಆ ಅವಧಿ ಮುಗಿದಿದೆ. ಮುಂದಿನ ದಿನಮಾನಗಳಲ್ಲಿ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಈ ವಿಷಯ ತರುತ್ತೇನೆ.. ಮಾನ್ಯ ಮುಖ್ಯಂತ್ರಿಗಳು ಅಲ್ಲಿಗೆ ಹೋದಾಗ ಕನಿಷ್ಠ 10 ಸಾವಿರ ಕ್ವಿಂಟಾಲ್‌ನಷ್ಟು ಖರೀದಿ ಮಾಡುವುದಾಗಿ ಹೇಳಿದ್ದರು. ಕೇಂದ್ರ ಸರ್ಕಾರ ದಿನಾಂಕ 17.4.2010ರವರೆಗೆ ಮಾತ್ರ ಖರೀದಿಸಲು ನಮಗೆ permission ಕೊಟ್ಟಿತ್ತು. ಆದರೆ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳು ಆ ಭಾಗದ ಅಡಿಕೆ ಬೆಳೆಯುವ ರೈತರಿಗೆ ತೊಂದರೆಯಾಗಬಾರದು ಎಂಬ ದೃಷ್ಟಿಯಿಂದ 30.06.2010ರವರೆಗೂ ಖರೀದಿಯನ್ನು ಮುಂದುವರೆಸುವ ಕೆಲಸವನ್ನು ಮಾಡಿದರು. ನಾವು ಮೊದಲು 10 ಸಾವಿರ ಕ್ವಿಂಟಾಲ್‌ಗೆ ಸೀಮಿತವಾಗುವಂತೆ ಖರೀದಿಸಬೇಕೆಂದು ಅಂದಕೊಂಡಿದ್ದೆವು. ರೈತರ ಬೇಡಿಕೆಯ ಆಧಾರದ ಮೇಲೆ 15 ಸಾವಿರ ಕ್ವಿಂಟಾಲ್‌ಗಳವರೆಗೆ ಖರೀದಿ ಮಾಡಬೇಕೆನ್ನುವ ಪ್ರಸ್ತಾವನೆ ಸರ್ಕಾರದ ಮುಂದೆ ಬಂದಿತ್ತು. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಂಡಿದ್ದರಿಂದ, 15 ಸಾವಿರ ಕ್ವಿಂಟಾಲ್‌ವರೆಗೂ ಸಹ ಇವತ್ತು ನಾವು ಅಡಿಕೆ ಖರೀದಿ ಮಾಡಿದ್ದೇವೆ. ಮುಂದಿನ ಅಕ್ಟೋಬರ್‌ಗೆ ಹೊಸ ಅಡಿಕೆ ಬರುವ season ಶುರುವಾಗುತ್ತಿದೆ. ಈಗಾಗಲೇ ಬಂದಂತಹ ಸಾಕಷ್ಟು ಅಡಿಕೆಯನ್ನು ಖರೀದಿ ಮಾಡುವಂತಹ ಕೆಲಸ ಮಾಡಲಾಗಿದೆ. 15,369 ರೈತರಿಂದ 36,965 ಕ್ವಿಂಟಾಲ್‌ನಷ್ಟು ಅಡಿಕೆಯನ್ನು ಖರೀದಿಸಿರುವುದನ್ನು ಮಾನ್ಯ ಸದಸ್ಯರ ಗಮನಕ್ಕೆ ತರಲಿಕ್ಕೆ ಇಷ್ಟಪಡುತ್ತೇನೆ. ಆ ರೀತಿ ಕ್ಯಾಂಪ್ಕೋದವರು ಏನಾದರೂ ತಪ್ಪು ಮಾಡುತ್ತಿದ್ದರೆ, ಆ ತಪ್ಪನ್ನು ತಿದ್ದುವಂತಹ ಕೆಲಸವನ್ನು ಮತ್ತು ಕ್ಯಾಂಪ್ಕೋದವರಿಗೆ ಆ ತಪ್ಪನ್ನು ಸರಿಪಡಿಸಿಕೊಳ್ಳುವಂತೆ ಹೇಳುವ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಯು ಟಿ ಖಾದರ್: ಮಾನ್ಯ ಅಧ್ಯಕ್ಷರೆ, ರಾಜ್ಯ ಸರ್ಕಾರ ಬೆಂಬಲ ಬೆಲೆಯನ್ನು ಘೋಷಿಸುವ ಮೂಲಕ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಡಿಕೆ ಬೆಳೆಯನ್ನು

ನಿರ್ಮಾಮ ಮಾಡಿದ್ದಾರೆ. ಇವತ್ತು ತಾವು 69 ರೂ. Value ಇದ್ದವರಿಗೆ ಮಾತ್ರ 6 ರೂ. ಬೆಂಬಲ ಬೆಲೆ ಘೋಷಿಸಿದ್ದೀರಿ. ಇದು ಒಟ್ಟು 75 ರೂ.ಗಳಾಯಿತು. ಆದರೆ ಅಲ್ಲಿ ಮಾರ್ಕೆಟ್ ಬೆಲೆ 75 ರೂ.ಗಳು already ಇತ್ತು. First qualityಯನ್ನು ಯಾರು ತೀರ್ಮಾನ ಮಾಡುತ್ತಾರೆ? ಅದನ್ನು ಕ್ಯಾಂಪ್ಕೋದವರು ತೀರ್ಮಾನ ಮಾಡುತ್ತಾರೆ. ಯಾರು ಅವರಿಗೆ ಬೇಕೋ ಅವರಿಗೆ ಮಾತ್ರವೇ ಅವರು 69 ರೂ.ಗಳಂತೆ ಹಾಕುತ್ತಿದ್ದಾರೆ. ಯಾರು ಅವರಿಗೆ ಬೇಡವೋ, ಅವರ ಮಾಲನ್ನು ತಿರಸ್ಕರಿಸಲಾಗುತ್ತಿದೆ. ಬಡ ಹಾಗೂ ಜನಸಾಮಾನ್ಯ ರೈತರು ಈ ಸಂದರ್ಭದಲ್ಲಿ ಏನು ಮಾಡಬೇಕೆಂಬುದನ್ನು ಸರ್ಕಾರದವರು ಆಲೋಚನೆ ಮಾಡಬೇಕಾಗುತ್ತದೆ. ಸರ್ಕಾರಕ್ಕೆ ಅಡಿಕೆ ಬೆಳೆಗಾರರ ಮೇಲೆ ನಿಜವಾದ ಕಳಕಳಿ ಏನಾದರೂ ಇದ್ದರೆ, ಮಾರ್ಕೆಟ್ ಬೆಲೆಯಾದ 75 ರೂ.ಗಳ ಮೇಲೆ ಮತ್ತೆ 10 ರೂ.ಗಳನ್ನು ಪ್ರೋತ್ಸಾಹಧನವನ್ನಾಗಿ ಕೊಡುವ ಕೆಲಸವನ್ನು ಮಾಡಬೇಕು. ಅವರು 69 ರೂ.ಗಳಿಗೆ ಖರೀದಿಸಿ, 100 ರೂ.ಗಳಿಗೆ ಮಾರಾಟ ಮಾಡುವಂತಹ ವ್ಯವಸ್ಥೆ ನಡೆಯುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಅಡಿಕೆ ಬೆಳಗಾರರನ್ನು ಇಲ್ಲಿಗೆ ಕರೆಸಿ, ಈ ಎಲ್ಲಾ ಸಮಸ್ಯೆಗಳ ಬಗ್ಗೆ ಅವರೊಡನೆ ಚರ್ಚಿಸಿ, ಸಮಸ್ಯೆಗಳಿಗೆ ಪರಿಹಾರ ಕೊಡಿಸುವಂತಹ ಕೆಲಸವನ್ನು ಸರ್ಕಾರದವರು ಮಾಡಬೇಕು.

ಶ್ರೀ ಕೆ ಅಭಯಚಂದ್ರ: ಇವತ್ತು ಸರ್ಕಾರ ಬೆಂಬಲ ಬೆಲೆಯನ್ನು ಘೋಷಿಸಿದ್ದರೂ ಕೂಡ, ಬೆಂಬಲ ಬೆಲೆ ಸ್ಥಿರತೆಗೆ ಬರಲಿಲ್ಲ. ಇವತು ಅದು ಸ್ಥಿರತೆಗೆ ಬಾರದಿರುವುದರಿಂದಾಗಿ ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರರೇನಿದ್ದಾರೆ, ಅವರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಅಲ್ಲಿ ಕೂಲಿ ಕೋಡಲಿಕ್ಕಾಗುತ್ತಿಲ್ಲ. ಅಷ್ಟು ದೊಡ್ಡ ಕಷ್ಟದ ಸಮಸ್ಯೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಡಿಕೆ ಬೆಳೆಗಾರರಿದ್ದಾರೆ. ಸರ್ಕಾರ ಅವರಿಗೆ ಸ್ವಲ್ಪ ಸ್ಪಂದಿಸುವಂತಹ ಕೆಲಸವನ್ನು ಮಾಡಬೇಕು. First qualityಯನ್ನು ಮಾತ್ರ purchase ಮಾಡಿದರೆ second quality ಯವರು ಏನು ಮಾಡಬೇಕು? ಅಲ್ಲಿ ಕಳೆದ ವರ್ಷ ವಿಶೇಷ ಮಳೆ ಬಂದಿದ್ದರಿಂದಾಗಿ ಅಡಿಕೆ ಸರಿಯಾಗಿ ಒಣಗಿಸಲಿಕ್ಕೆ ಸಾಧ್ಯವಾಗಲಿಲ್ಲ.. ಹೀಗಾಗಿ ಕ್ವಾಲಿಟಿಯಲ್ಲಿ ಸ್ವಲ್ಪ ತೊಂದರೆಯಾಗಿದೆ. ಆದರೆ ಇವತ್ತು ಕ್ಯಾಂಪ್ಕೋದವರು ನಾವು first qualityಯನ್ನು ಮಾತ್ರ ತೆಗೆದುಕೊಳ್ಳುತ್ತೇವೆಂದು ಹೇಳಿ ಅನ್ಯಾಯ

ಮಾಡುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯ ರೈತರಿಗೆ ಅನ್ಯಾಯವಾಗಿದೆ. ಅದನ್ನು ಸರಿಪಡಿಸುವಂತಹ ಕೆಲಸವನ್ನು ಮಾನ್ಯ ಸಚಿವರು ಮಾಡಬೇಕು.

ಶ್ರೀ ಕೆ ವಸಂತ ಬಂಗೇರ: ಮಾನ್ಯ ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಡ ರೈತರು ರಿಕ್ಷಾ ಅಥವಾ ಜೀಪನ್ನು ಬಾಡಿಗೆ ಮಾಡಿ, ಕ್ಯಾಂಪ್ಕೋ ಸಂಸ್ಥೆಗೆ ಅಡಿಕೆಯನ್ನು ಕೊಂಡು ಹೋಗಿ, ಅಲ್ಲಿ ತಿರಸ್ಕಾರ ಮಾಡಿದಾಗ ಅದನ್ನು ವಾಪಸ್ ತಂದು, ಕಿಸೆಯಿಂದ ಬಾಡಿಗೆ ಕೊಡುವಂತಹ ಕೆಲಸವನ್ನು ಮಾಡುತ್ತಿದ್ದಾರೆ. ಕ್ಯಾಂಪ್ಕೋ ಸಂಸ್ಥೆ ಹುಟ್ಟಿದ್ದು, ಅಡಿಕೆ ಬೆಳೆಗಾರರ ರಕ್ಷಣೆಗಾಗಿ. ಅದೇ ಸಂಸ್ಥೆ ಈಗ ಅಡಿಕೆ ಬೆಳಗಾರರನ್ನು ಭಕ್ಷಣೆ ಮಾಡುತ್ತಿದೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೇನೆ. ಈ ಸಂಸ್ಥೆ ಅಡಿಕೆಗೆ ಒಳ್ಳೆಯ ಬೆಲೆಯನ್ನು ಕೊಡಿಸಬೇಕೆನ್ನುವ ತೀರ್ಮಾನವನ್ನು ಮಾಡಿ, ತೊಂದರೆ ಕೊಡುವಂತಹ ಕೆಲಸವನ್ನು ಮಾಡುತ್ತಿದೆ. ಕ್ಯಾಂಪ್ಕೋ ಸಂಸ್ಥೆ ರಾಜಕೀಯ ಮಾಡುತ್ತಿದೆ. ಇದನ್ನು ತಕ್ಷಣ ನಿಲ್ಲಿಸಬೇಕು. ಇದು ರಾಜಕೀಯ ಮಾಡಲಿಕ್ಕೆ ಇರುವಂತಹ ಸಂಸ್ಥೆಯಲ್ಲ. ಅದಕ್ಕಾಗಿ ಹುಟ್ಟಿದ ಸಂಸ್ಥೆಯೂ ಅಲ್ಲ. ಇದನ್ನು ತಕ್ಷಣ ನಿಲ್ಲಿಸುವಂತಹ ಕೆಲಸವನ್ನು ಮಾಡಬೇಕು. ಸರ್ಕಾರ ಈ ಸಂಸ್ಥೆಯನ್ನು ಬಿಟ್ಟು ಬದಲಿ ಸಂಸ್ಥೆಯನ್ನು ಹುಡುಕಬೇಕು. ಮುಂದಿನ ವರ್ಷದಿಂದ ಬದಲಿ ಸಂಸ್ಥೆಗೆ ಖರೀದಿ ಕೆಲಸ ನಿರ್ವಹಿಸುವ ವ್ಯವಸ್ಥೆಯನ್ನು ಸರ್ಕಾರ ಮಾಡುತ್ತದೆಯೇ ಎಂದು ಕೇಳಬಯಸುತ್ತೇನೆ. 2006–07ರಲ್ಲಿ 94.51 ಕೋಟಿ ರೂ.ಗಳು, 2007–08ರಲ್ಲಿ 41.58 ಕೋಟಿ ರೂ.ಗಳು, 2008–09ರಲ್ಲಿ 240.68 ಕೋಟಿ ರೂ.ಗಳು, 2009–10ರಲ್ಲಿ 180 ಕೋಟಿ ರೂ.ಗಳು ಮತ್ತು 2010–11ರಲ್ಲಿ 25 ಕೋಟಿ ರೂ.ಗಳ ವಿವಿಧ ಕೃಷಿ ಹಾಗೂ ತೋಟಗಾರಿಕಾ ಉತ್ಪನ್ನಗಳನ್ನು ಸರ್ಕಾರ ರೈತರಿಂದ ಖರೀದಿಸಿದೆ ಎಂದು ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಹೇಳಿದ್ದಾರೆ. ಏಕೆ ಈ ವ್ಯತ್ಯಾಸ? ಯಾವ ಬಡವರಿಗೆ ಪ್ರಯೋಜನವಾಗಿದೆ? ಈ ಕ್ಯಾಂಪ್ಕೋ ಸಂಸ್ಥೆ ಬಂದಿದ್ದರಿಂದ ಮಾರ್ವಾಡಿಗಳಿಗೆ ಒಳ್ಳೆಯ ಲಾಭವಾಗುತ್ತಿದೆ. ಇದರಲ್ಲಿ ಕ್ಯಾಂಪ್ಕೋ ಸಂಸ್ಥೆ ಶಾಮೀಲಾಗಿದೆ. ಬಡವರಿಗೆ ತೊಂದರೆಯನ್ನು ಕೊಡುತ್ತಿದೆ, ಬಡವರ ರಕ್ತವನ್ನು ಹೀರುತ್ತಿದೆ. ಇದನ್ನು ನಿಲ್ಲಿಸುತ್ತೀರಾ ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಶಿವರಾಜ್ ಎಸ್ ತಂಗಡಗಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಖಾದರ್‌ರವರು ಬೆಂಬಲ ಬೆಲೆ ಬಗ್ಗೆ ಹೇಳಿದರು. ಕೇಂದ್ರ ಸರ್ಕಾರ per quintal ಗೆ 6900/–

ರೂ.ಗಳನ್ನು announce ಮಾಡಿತ್ತು. ಆದರೆ ನಮ್ಮ ಸರ್ಕಾರ ಹೆಚ್ಚುವರಿಯಾಗಿ 600/– ರೂ.ಗಳನ್ನು ಕೊಡುವಂತಹ ಕೆಲಸವನ್ನು ಮಾಡಿದೆ. ಈಗ ನಾವು ಕ್ವಿಂಟಾಲ್‌ಗೆ 7,500/– ರೂ.ಗಳನ್ನು ಕೊಟ್ಟು ಖರೀದಿಸುವ ಕೆಲಸವನ್ನು ಮಾಡಿದ್ದೇವೆ. ಕೇಂದ್ರ ಸರ್ಕಾರ ಖರೀದಿಗೆ ನಿಗದಿಪಡಿಸಿದ ದಿನಾಂಕ 17.4.2010ಕ್ಕೆ ಮುಗಿದ್ದಿತ್ತು ಆದರೂ ನಾವು 30.06.2010ರವರೆಗೆ ಒಂದೂವರೆ ತಿಂಗಳು ಹೆಚ್ಚಿಗೆ ಅವಧಿಗೆ ಖರೀದಿ ಮಾಡಿದ್ದೇವೆ. ಆದರೆ ಆ ರೀತಿ ತೊಂದರೆ ಏನೂ ಆಗಿಲ್ಲ. ರೇಟ್ ಕೂಡ ಚೆನ್ನಾಗಿದೆ. ರೇಟ್ ಬಗ್ಗೆ ಅಂಥಾದ್ದೇನೂ ತೊಂದರೆಯಿಲ್ಲ. ಮಾನ್ಯ ಬಂಗೇರರವರು, ಕ್ಯಾಂಪ್ಕೋದವರು ರಾಜಕಾರಣ ಮಾಡುತ್ತಿದ್ದಾರೆ ಎನ್ನುವ ಮಾತನ್ನು ಹೇಳಿದರು. ಆದರೆ ಇಲ್ಲಿ ರಾಜಕಾರಣ ಮಾಡುವಂತಹ ಪ್ರಶ್ನೆ ಬರುವುದಿಲ್ಲ. ಏಕೆಂದರೆ ಕ್ಯಾಂಪ್ಕೋ ಮೊದಲಿನಿಂದಲೂ ಪ್ರಮಾಣಿಕವಾಗಿ ಒಳ್ಳೆಯ ಕೆಲಸವನ್ನು ಮಾಡಿಕೊಂಡು ಬರುತ್ತಿದೆ. ಇವತ್ತು ನಮ್ಮ ಗಮನಕ್ಕೆ ತಂದಿದ್ದೀರಿ. ನಾವು ಆ ಬಗ್ಗೆ ಪರಿಶೀಲನೆ ಮಾಡಿ, ಆ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ. ನಮ್ಮ ಸರ್ಕಾರ ರೈತರ ಬಗ್ಗೆಯೇ ಸದಾ ಚಿಂತನೆ ಮಾಡುತ್ತದೆ. ರೈತರ ಬಗ್ಗೆಯೇ ನಮ್ಮ ಸರ್ಕಾರ ಹೆಚ್ಚು ಪ್ರಾಮಾಣಿಕವಾಗಿ ಕೆಲಸ ಮಾಡತ್ತಿರುವುದರಿಂದ ಯಾವುದೇ ತೊಂದರೆಯಾಗದ ರೀತಿಯಲ್ಲಿ ಕ್ಯಾಂಪ್ಕೋದವರನ್ನು ಕರೆಸಿ, ನಾನು ಮಾತನಾಡುತ್ತೇನೆ. ಆ ರೀತಿ ರೈತರಿಗೆ ತೊಂದರೆಯಾಗದ ರೀತಿಯಲ್ಲಿ ನಾನು ಕ್ರಮವನ್ನು ಕೈಗೊಳ್ಳುತ್ತೇನೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಸಹಕಾರಿ ಬ್ಯಾಂಕುಗಳಿಗೆ ನಾಮನಿರ್ದೇಶನ ಮಾಡುವ ಬಗ್ಗೆ

70(404) ಶ್ರೀ ಶಿವಲಿಂಗೇಗೌಡ ಕೆ ಎಂ (ಅರಸೀಕೆರೆ)ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಹಕಾರಿ ಬ್ಯಾಂಕುಗಳಿಗೆ ಮತ್ತು ಸಂಘ ಸಂಸ್ಥೆಗಳಿಗೆ ಸರ್ಕಾರದ ವತಿಯಿಂದ ಸಾರ್ವಜನಿಕರನ್ನು ನಾಮನಿರ್ದೇಶನ ಮಾಡಲಾಗುತ್ತಿದೆಯೇ?

ಆ) ಹಾಗಿದ್ದಲ್ಲಿ ಈ ನಾಮನಿರ್ದೇಶನ ಮಾಡಲು ಅನುಸರಿಸುತ್ತಿರುವ ನಿಯಮಗಳಾವುವು?

ಲಕ್ಷ್ಮಣ ಸ. ಸವದಿ(ಸಹಕಾರ ಸಚಿವರು):

ಅ) ಹೌದು.